SN – 087

## III Semester B.Com. Examination, Nov./Dec. 2013
## (Fresh + Repeaters) (2012-13 and Onwards)
## KANNADA LANGUAGE – III
## ಸಾಹಿತ್ಯ ಸಲ್ಲಾಪ – ೨ ಮತ್ತು ವ್ಯಾವಹಾರಿಕ ಕನ್ನಡ

NEW HORIZON COLLEGE LIBRARY KASTURINAGAR BANGALORE-43

Time : 3 Hours Max. Marks : 100

### ಭಾಗ – ೧

### ಸಾಹಿತ್ಯ ಸಲ್ಲಾಪ - ೨

I. ಈ ಪದ್ಯದ ಭಾವಾರ್ಥ ಬರೆಯಿರಿ : (1×5=5)

ಅರಿಚರಣಪಾಂಸು ಪತ್ತಿರೆ
ಶರೀರಮಂ ತೊಡೆದು ಕಳೆದೆ ವಸ್ತ್ರಾಂಚಲದಿಂ
ಗುರುನಂದನ ನೀನೆನ್ನೀ
ಪರಿಭವಪಾಂಸುವನದೆಂತು ಪೇಟ್ ಕಳೆದಪೆಯೋ.

II. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : (3×5=15)

1) ಅಶ್ವತ್ಥಾಮನು ರಾಜ್ಯಲಕ್ಷ್ಮಿಯನ್ನು ಭೇಟಿ ಮಾಡುವ ಪ್ರಸಂಗವನ್ನು ಬರೆಯಿರಿ.
2) ತಂದೆಯಾದವನು ಮಗನ ವಿಚಾರದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಬಿಜ್ಜಳ ಅಭಿಪ್ರಾಯಪಡುತ್ತಾನೆ ?
3) ರಾಮಣ್ಣ ಮನೆಯಲ್ಲಿ ತಿಪ್ಪನನ್ನು ಕೆಲಸಕ್ಕಿಡಲು ಕಾರಣವೇನು ?
4) 'ಪ್ರತಿಯೊಂದು ಮನುಷ್ಯ ಸಮುದಾಯಕ್ಕೂ ಒಂದೊಂದು ಸಂಸ್ಕೃತಿ ಇದೆ' – ಎಂದು ಕಾರಂತರು ಅಭಿಪ್ರಾಯಪಡಲು ಕಾರಣವೇನು ?
5) ಕುಮಾರವ್ಯಾಸನ ಕಾವ್ಯದಲ್ಲಿ ಚಿತ್ರಿತಗೊಂಡ ದ್ರೌಪದಿಯ ಪಾತ್ರ ಕುರಿತು ಆರ್. ನಿರ್ಮಲಾ ಅವರು ವ್ಯಕ್ತಪಡಿಸುವ ವಿಚಾರಗಳಾವುವು ?

III. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (3×12=36)

1) ದುರ್ಯೋಧನನ ಪಾತ್ರ ಚಿತ್ರಣವನ್ನು 'ನಿನ್ನಿಂ ನಿಕೃಷ್ಟರೆಂಬರುಮೊಳರೇ' ಪದ್ಯ ಭಾಗದ ಹಿನ್ನೆಲೆಯಲ್ಲಿ ಚರ್ಚಿಸಿ.
2) 'ಇಬ್ಬರು ರೈತರು' ಕವಿತೆಯನ್ನು ವಿಶ್ಲೇಷಿಸಿ.
3) ಬಸವಣ್ಣನವರು ಕಲ್ಯಾಣವನ್ನು ತೊರೆಯಲು ಕಾರಣವಾದ ಸಂದರ್ಭವನ್ನು ವಿವರಿಸಿ.
4) 'ಹತ್ತಿರದವರಿಂದಲೇ ಅನಾಹುತ ಹೆಚ್ಚು' ಎನ್ನುವ ಮಾತು 'ಕಳ್ಳುಬಳ್ಳಿ' ಕತೆಗೆ ಹೇಗೆ ಒಪ್ಪುತ್ತದೆ ? ವಿಚಾರ ಮಾಡಿ.
5) ಭಾರತೀಯ ಸಂಸ್ಕೃತಿ ಬಗೆಗೆ ಕಾರಂತರ ಅಭಿಪ್ರಾಯವೇನು ? ವಿಮರ್ಶಿಸಿ.

P.T.O.

## ಭಾಗ – ೨

## ವ್ಯಾವಹಾರಿಕ ಕನ್ನಡ

I. ಮೂರಕ್ಕೆ ಸಂಕ್ಷಿಪ್ತ ಉತ್ತರ ಬರೆಯಿರಿ : (3×5=15)

1) ಸಂಕ್ಷೇಪ ಲೇಖನ.

2) ಕನ್ನಡ ಭಾಷೆಯ ಸ್ವರೂಪ.

3) ಪರಿಪತ್ರಗಳು.

4) ಸಾಮಾನ್ಯ ವಿಚಾರಣಾ ಪತ್ರ.

5) ವಾಚಕರ ವಾಣಿ.

II. ಈ ಗದ್ಯಭಾಗವನ್ನು ಸಂಕ್ಷಿಪ್ತಗೊಳಿಸಿ ಶೀರ್ಷಿಕೆಯನ್ನು ಬರೆಯಿರಿ : (1×5=5)

ಮಲೆನಾಡಿನ ಸುಂದರ ಗಿರಿ ಶ್ರೇಣಿಗಳ ತಪ್ಪಲಿನ ನಡುವೆ ನಮ್ಮ ಮನೆಯೊಂದಿದೆ. ಮನೆಯ ಉಪ್ಪರಿಗೆಯ ಬಾಗಿಲು ಪೂರ್ವದಿಕ್ಕಿಗೆ ತೆರೆದುಕೊಂಡಿದೆ. ಉಳಿದೆಲ್ಲ ದಿಕ್ಕಿಗೂ ವಿಶಾಲವಾದ ಕಿಟಕಿಗಳಿವೆ. ಅಲ್ಲಿ ಕುಳಿತು ನೋಡಿದರೆ ಹಚ್ಚ ಹಸುರಿನಿಂದ ಕಂಗೊಳಿಸುವ ಪರ್ವತಗಳು, ಅನಂತ ನಿಬಿಡಾರಣ್ಯ ಶ್ರೇಣಿಗಳು ಗಂಭೀರವಾಗಿ, ಸುಂದರವಾಗಿ ರಂಜಿಸುವುವು. ಅಲ್ಲಿ ನಮಗೆ ತಿಳಿಯುತ್ತದೆ, ಹಸುರು ಬಣ್ಣದಲ್ಲಿ ಎಷ್ಟು ಬಗೆಗಳಿರಬಹುದೆಂದು, ಆ ಗಿರಿಗಳಾಚೆಯಲ್ಲಿ ನೀಲಾಕಾಶವು ಪಾತಾಳದಲ್ಲಿ ನಿಂತು ಸ್ವರ್ಗವನ್ನು ಇಣಿಕಿ ನೋಡುವಂತೆ ಧೀರ ಗಂಭೀರವಾಗಿರುವುದು. ಈ ಗಿರಿ ಶಿಖರ ರೇಖೆಯಲ್ಲಿ ಇತರ ವೃಕ್ಷಗಳಿಗಿಂತ ಹಿರಿದಾಗಿ ಎತ್ತರವಾಗಿ ಬೆಳೆದ ಹೆಮ್ಮರಗಳು ಆಕಾಶಪಟದಲ್ಲಿ ಬರೆದು ಕೆತ್ತಿ ಮೆತ್ತಿದ ಸಜೀವ ಚಿತ್ರಗಳಂತೆ ತೋರಿ, ವಿಶ್ವ ವರ್ಣ ಶಿಲ್ಪಿಯ ವರ್ಣನಾ ವೈಖರಿಯ ಕಲಾ ಕೌಶಲವನ್ನು ಸಾರುವ ಗೆಲ್ಗಂಬಗಳ ಮೇಲೆ ಹಾರಾಡುವ ಶ್ಯಾಮಲ ಕೇತನಗಳಂತೆ ಕಂಗೊಳಿಸುವುವು. ಆ ದೃಶ್ಯ ದಿನದಿನಕ್ಕೂ ಕವನಗಳನ್ನು ವಿರಚಿಸುವ ಕಾವ್ಯ ರಂಗದಂತೆ ಮರೆಯುವುದು. ಮಳೆಗಾಲದಲ್ಲಿ ಒಂದು ದೃಶ್ಯ ; ಬೇಸಿಗೆಯಲ್ಲಿ ಇನ್ನೊಂದು ದೃಶ್ಯ, ಬೆಳಗಿನಲ್ಲಿ ಮತ್ತೊಂದು ದೃಶ್ಯ ; ಮಳೆಗಾಲದಲ್ಲಿ ಮಗದೊಂದು ದೃಶ್ಯ ; ಹಗಲಿನಲ್ಲಿ ಒಂದು ದೃಶ್ಯ – ಹೀಗೆ ಹೊತ್ತು ಹೊತ್ತಿಗೂ ಸೌಂದರ್ಯದಿಂದ ನಲಿಯುವ ನಿಸರ್ಗ ರಮಣೀಯತೆಯು ನೋಡುಗರ ಮೈ ಮರೆಸುವಂತೆ ಮನೋಜ್ಞವಾಗಿರುವುದು.

III. **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2×12=24)

1) ಕನ್ನಡ ಭಾಷಾ ಬಳಕೆಯಲ್ಲಿರುವ ವ್ಯತ್ಯಾಸಗಳಾವುವು ? ವಿವರಿಸಿ.

2) ವ್ಯವಹಾರ ಪತ್ರದ ಸ್ವರೂಪ ಮತ್ತು ಅದರ ವಿವಿಧ ಅಂಗಗಳನ್ನು ಕುರಿತು ಬರೆಯಿರಿ.

3) ನಿಮ್ಮ ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದ ಆಹ್ವಾನ ಪತ್ರಿಕೆ ಹಾಗೂ ಕಾರ್ಯಕ್ರಮ ಪಟ್ಟಿಯನ್ನು ಸಿದ್ಧಪಡಿಸಿ.

4) ದಿನಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವ ಜಾಹೀರಾತಿನಂತೆ, ಯಲಹಂಕದ ಹಿಂದೂಸ್ತಾನ್ ಲಿಮಿಟೆಡ್ ಸಂಸ್ಥೆಯಲ್ಲಿ ತೆರವಾಗಿರುವ ಪ್ರಧಾನ ಲೆಕ್ಕಾಧಿಕಾರಿ ಹುದ್ದೆಗೆ ಒಂದು ಅಭ್ಯರ್ಥನ ಪತ್ರವನ್ನು ಬರೆಯಿರಿ.